Kristu Jayanti College

AUTONOMOUS Bengaluru

Reaccredited A++ Grade by NAAC | Affiliated to Bengaluru North University

Light & Prosperity

Kristu Jayanti College 1999 - 2024

Empowering Visions, Enriching Lives

## ಕನ್ನಡ ವಿಭಾಗ

ಸಹಯೋಗ

**ಕರ್ನಾಟಕ ಜಾನಪದ ಅಕಾಡೆಮಿ**

ಕರ್ನಾಟಕ ಸರ್ಕಾರ, ಬೆಂಗಳೂರು

**ಕನ್ನಡ ಸಾಹಿತ್ಯ ರಂಗ**

ಡಲ್ಲಾಸ್, ಅಮೆರಿಕ

# ಕನ್ನಡ ಶಿಷ್ಟ ಪರಂಪರೆ ಮತ್ತು ಜಾನಪದ ಲೋಕ

## ಅಂತಾರಾಷ್ಟ್ರೀಯ ವಿಚಾರ ಸಂಕಿರಣ

**17 ಜನವರಿ 2025**

# ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)

ಕ್ರಿಸ್ತು ಜಯಂತಿ ಕಾಲೇಜು 1999ರಲ್ಲಿ ಆರಂಭವಾಗಿ 'ಬೋಧಿನಿಕೇತನ ಟ್ರಸ್ಟ್' ವತಿಯಿಂದ 'ಬೆಳಕು ಮತ್ತು ಸಮೃದ್ಧತೆ' ಎಂಬ ಧ್ಯೇಯದೊಂದಿಗೆ ಕಾರ್ಯನಿರ್ವಹಿಸಲ್ಪಡುತ್ತಿದೆ. ಇದು ಸಿ.ಎಂ.ಐ. ಎಂಬ ದೇಶೀಯ ಕ್ಯಾಥೋಲಿಕ್ ಧರ್ಮದ ಸಮೂಹವಾಗಿದ್ದು 19ನೇ ಶತಮಾನದ ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಕರಾದ ಸಂತ ಕುರಿಯಾಕೋಸ್ ಎಲಿಯಾಸ್ ಚಾವ್ರ ಅವರ ದೂರದೃಷ್ಟಿಯಿಂದ ಸಾಕಾರಗೊಂಡದ್ದು, 1846ರಿಂದ ಭಾರತದಾದ್ಯಂತ ಶೈಕ್ಷಣಿಕ ಸೇವೆಯನ್ನೊದಗಿಸುತ್ತಿದೆ. ಈ ಕಾಲೇಜು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು, 2013ರಲ್ಲಿ ಸ್ವಾಯತ್ತ ಸಂಸ್ಥೆಯ ಮಾನ್ಯತೆ ಪಡೆಯಿತು. 'ನ್ಯಾಕ್' ವತಿಯಿಂದ 'A++' ಶ್ರೇಣಿಯನ್ನು ಪಡೆದಿದ್ದು, ಯುಜಿಸಿ ವತಿಯಿಂದ ೩(ಎಫ್) ಮತ್ತು 12(ಬಿ) ಕಾಲಂನ ಅಡಿಯಲ್ಲಿ ಮಾನ್ಯ ಮಾಡಲ್ಪಟ್ಟಿದೆ. ರಾಷ್ಟ್ರಮಟ್ಟದಲ್ಲಿ ಭಾರತ ಸರ್ಕಾರವು ನೀಡುವ '2020ರ ಸ್ವಚ್ಛ ಮತ್ತು ಸ್ಮಾರ್ಟ್ ಕ್ಯಾಂಪಸ್' ಎಂಬ ಪ್ರಥಮ ಬಹುಮಾನವನ್ನು ನಮ್ಮ ಕಾಲೇಜು ಪಡೆದುಕೊಂಡಿರುವುದು ಹೆಮ್ಮೆಯ ವಿಚಾರ. 'ಇಂಡಿಯಾ ಟುಡೆ' ಪತ್ರಿಕೆಯ ಸಮೀಕ್ಷೆಯ ಪ್ರಕಾರ ಭಾರತೀಯ ಮಟ್ಟದಲ್ಲೇ ಒಂದು ಉತ್ತಮ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಶೈಕ್ಷಣಿಕ ತತ್ವಶಾಸ್ತ್ರ, ಜ್ಞಾನ, ಕೌಶಲ, ಮೌಲ್ಯ ಮತ್ತು ಮನೋಭಾವನೆಗಳ ತಳಹದಿಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಯತ್ತ ಗಮನಹರಿಸಿ ಮಾಹಿತಿ ತಂತ್ರಜ್ಞಾನದೊಂದಿಗೆ ಜಾಗತಿಕ ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಉತ್ತಮವಾದ ಮಾಹಿತಿ, ತರಬೇತಿಯನ್ನು ನೀಡಿ ಭವಿಷ್ಯದ ರೂವಾರಿಗಳನ್ನಾಗಿಸುವಲ್ಲಿ ಪರಿಣಿತಿ ಹೊಂದಿರುವ ಬೋಧಕವರ್ಗವನ್ನು ಹೊಂದಿರುವ ಸಂಸ್ಥೆಯಾಗಿದೆ. ಪ್ರಸ್ತುತದಲ್ಲಿ 25ನೇ ವರ್ಷದ ಬೆಳ್ಳಿಹಬ್ಬ ಸಂಭ್ರಮದಲ್ಲಿದೆ.

# ಕನ್ನಡ ವಿಭಾಗ


ಕ್ರಿಸ್ತು ಜಯಂತಿ ಕಾಲೇಜಿನ ಮಾನವಿಕಶಾಸ್ತ್ರಗಳ ನಿಕಾಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ವಿಭಾಗವು ಪದವಿ ಹಂತದ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿಬಿಎ., ಬಿಸಿಎ. ಮತ್ತು ಎಲ್.ಎಲ್.ಬಿ ಕೋರ್ಸುಗಳಿಗೆ ಕನ್ನಡ ಭಾಷಾ ಪಠ್ಯವನ್ನು ಬೋಧಿಸುತ್ತಿದೆ. ಈ ಶೈಕ್ಷಣಿಕ ವರ್ಷದಿಂದ ಕನ್ನಡೇತರರಿಗೆ ಕನ್ನಡ ಭಾಷಾ ಕಲಿಕೆಯ ಕೋರ್ಸ್ ಪ್ರಾರಂಭ ಮಾಡಿದೆ. ವಿಶೇಷವಾಗಿ ಕನ್ನಡ ಎಂ.ಎ ಕೋರ್ಸ್ ಕೂಡ ಪ್ರಾರಂಭವಾಗಿದೆ. ವಿಭಾಗವು ಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿಯನ್ನು ಬಿಂಬಿಸುವ ಹಲವು ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸುತ್ತಾ ಬಂದಿದ್ದು, ಸಾಹಿತ್ಯ ಪ್ರವಾಸ, ಕನ್ನಡ ಹಬ್ಬ ಹಾಗೂ ರಂಗಭೂಮಿ ತರಬೇತಿಯೊಂದಿಗೆ ರಂಗಚಟುವಟಿಕೆಗಳನ್ನು ಸಕ್ರಿಯಗೊಳಿಸುವುದು. ಕನ್ನಡ ವಿದ್ಯಾರ್ಥಿಗಳಿಗೆ ವಿಭಾಗವು ಪುಸ್ತಕ ಓದು, ಪುಸ್ತಕ ವಿಮರ್ಶೆ, ಗಾಯನ ಸ್ಪರ್ಧೆ, ಕಾವ್ಯವಾಚನ, ಕವಿಗೋಷ್ಠಿ ಮತ್ತು ಕನ್ನಡ ಸಂಸ್ಕೃತಿ ಎಂಬ ಹೆಸರಿನ ಬ್ಲಾಗ್‌ನಲ್ಲಿ ತಮ್ಮ ಪ್ರತಿಭೆ ಅನಾವರಣಕ್ಕೆ, ಬರವಣಿಗೆಗೆ ಅವಕಾಶ ಕಲ್ಪಿಸಲಾಗಿದೆ. ಅಧ್ಯಾಪಕ ಅಭಿವೃದ್ಧಿ ಕಾರ್ಯಕ್ರಮ, ಕನ್ನಡ ರಾಜ್ಯೋತ್ಸವ, ರಾಷ್ಟ್ರೀಯ ವಿಚಾರ ಸಂಕಿರಣದಂತಹ ಹಲವು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಾ ಬಂದಿದೆ. ರಾಷ್ಟ್ರಮಟ್ಟದ ಕ್ರಿಸ್ತು ಜಯಂತಿ ಕನ್ನಡ ಸಂಶೋಧನ ಪತ್ರಿಕೆ (KJKSP)ಯನ್ನು ಕನ್ನಡ ವಿಭಾಗದಿಂದ ಪ್ರಕಟಿಸಲಾಗುತ್ತಿದೆ.

# ವಿಚಾರ ಸಂಕಿರಣದ ಆಶಯ


ಕಾಲಾನುಕಾಲದಿಂದಲೂ ನೆಲಸಂಸ್ಕೃತಿಯನ್ನು ತಮ್ಮ ಅಗಾಧವಾದ ಅನುಭವ, ಅರಿವು ಹಾಗೂ ಕಾರುಣ್ಯಗಳಿಂದ ಕಟ್ಟಿಕೊಂಡು ಬಂದ ಜಾನಪದರು ಬಯಲು ವಿಶ್ವವಿದ್ಯಾಲಯದ ಜೀವಂತಜ್ಯೋತಿಗಳು. ಜಾನಪದರ ಬದುಕು ಮತ್ತು ಕಲೆಗಳು ಒಂದರೊಳಗೊಂದು ಬೇರೂರಿಕೊಂಡಿರುವ ಕಾರಣದಿಂದಾಗಿ ಜಾನಪದ ಲೋಕಕ್ಕೆ ಮಹೋನ್ನತವಾದ ಪ್ರಾಮಾಣಿಕತೆ, ಪ್ರಬುದ್ಧತೆ ಮತ್ತು ಕಲಾತ್ಮಕತೆ ಪ್ರಾಪ್ತವಾಗಿದೆ. ಕನ್ನಡದ ಶಿಷ್ಟಪರಂಪರೆಯ ಪೂರ್ವಕಾಲೀನ ಕವಿಯಾದ ಕವಿರಾಜಮಾರ್ಗಕಾರನು ಈ ನಾಡಿನ ಜಾನಪದ ಲೋಕದ ಜಾಣ್ಮೆ ಮತ್ತು ಬಲ್ಮೆಯನ್ನು ಕುರಿತು ಹೆಮ್ಮೆಯಿಂದ ದಾಖಲಿಸುತ್ತಾ, ಹದವನ್ನರಿತು ನುಡಿಯುವ, ನುಡಿದುದನ್ನು ಅರಿತು ಅರ್ಥೈಸುವ ಈ ನಾಡಿನ ಜನರು ಚತುರತೆಯುಳ್ಳವರು, ನಿಜವಾಗಿಯೂ ಕುರಿತೋದದೆಯುಂ ಕಾವ್ಯಪ್ರಯೋಗ ಮಾಡುವ ಪರಿಣತಮತಿಗಳಾಗಿದ್ದರು ಎಂದಿರುವುದು ಅವಿಸ್ಮರಣೀಯ. ಜಾನಪದ ಮತ್ತು ಶಿಷ್ಟಪದಗಳ ನಡುವಿನ ಅನುಸಂಧಾನ ವಿಶಿಷ್ಟವಾದುದು. ಒಮ್ಮೊಮ್ಮೆ ದೂರವಾಗಿ, ಮತ್ತೊಮ್ಮೆ ಹತ್ತಿರವಾಗಿ, ಮಗದೊಮ್ಮೆ ಜೊತೆಯಾಗಿ, ಕೊನೆಗೊಮ್ಮೆ ಒಂದರೊಳಗೊಂದಾಗಿ, ಕೆಲವೊಮ್ಮೆ ಎದುರುಬದುರಾಗಿ ಅಸ್ಮಿತೆಯ ಅನನ್ಯತೆಯಲ್ಲಿ ತಮ್ಮನ್ನು ತಾವು ಬೆಳಗಿಕೊಂಡು ಬಂದಿರುವ ಬಗೆಯು ಚೇತೋಹಾರಿಯಾದುದು. ಹೀಗೆ ಬಯಲು ನೆಲೆಯ ಜಾನಪದ ಲೋಕ ಹಾಗೂ ಆಲಯ ನೆಲೆಯ ಶಿಷ್ಟ ಪರಂಪರೆಗಳ ನಡುವೆ ಸಾಧ್ಯವಾಗಿರುವ ಸಾಂಸ್ಕೃತಿಕ ಚಲನೆಯನ್ನು ಅವಲೋಕಿಸುವುದು ವಿಶ್ವಾತ್ಮಕ ಅರಿವಿಗೆ ದ್ಯೋತಕ. 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಕನ್ನಡದ ಕಣ್ವ ಬಿ.ಎಂ.ಶ್ರೀ ಅವರ ನುಡಿಯಂತೆ ಜಗತ್ತಿನ ಸರ್ವಸಂಸ್ಕೃತಿಗಳ ತಾಯಿಬೇರಾದ ಜಾನಪದ ಲೋಕವಿವೇಕವನ್ನು ಕನ್ನಡ ಸಂದರ್ಭದಲ್ಲಿ ಮರುದರ್ಶನ ಮಾಡುವ ಮೂಲಕ ಶಿಷ್ಟ ಮತ್ತು ಕಷ್ಟಕಾಲದ ವಿಕಾರಗಳಿಗೆ ಮಹಾಮದ್ದಾಗಿ ಮಾಡಿಕೊಳ್ಳಬೇಕೆಂಬ ಆಶಯದಿಂದ ಪ್ರಸ್ತುತ ವಿಚಾರಸಂಕಿರಣವನ್ನು ಆಯೋಜಿಸಲಾಗಿದೆ.

# ಸಂಶೋಧನ ಲೇಖನಗಳಿಗೆ ಆಹ್ವಾನ

- ಪ್ರಕೃತಿ ಮತ್ತು ಜಾನಪದ ಸಂಸ್ಕೃತಿ
- ಆದಿಮ ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿ
- ಚರಿತ್ರೆ ಮತ್ತು ಜಾನಪದ ಲೋಕ
- ಜಾನಪದ ಲೋಕ ಮತ್ತು ಕನ್ನಡ ಸಂಸ್ಕೃತಿ
- ಹಳಗನ್ನಡ ಸಾಹಿತ್ಯದಲ್ಲಿ ಜಾನಪದ ಲೋಕ
- ನಡುಗನ್ನಡ ಸಾಹಿತ್ಯದಲ್ಲಿ ಜಾನಪದ ಲೋಕ
- ವಚನಕಾರರು ಮತ್ತು ಜಾನಪದ ವಿವೇಕ
- ಶಾಸ್ತ್ರೀಯ ಪಠ್ಯಗಳು ಮತ್ತು ಜಾನಪದ ಜಗತ್ತು
- ಕನ್ನಡ ಜಾನಪದ ಲೋಕ ಮತ್ತು ಪಾಶ್ಚಾತ್ಯ ವಿದ್ವಾಂಸರು
- ಹೊಸಗನ್ನಡ ಸಾಹಿತ್ಯದಲ್ಲಿ ಜಾನಪದ ಲೋಕ
- ಶಿಷ್ಟ ಕಾವ್ಯಗಳು ಮತ್ತು ಜಾನಪದ ಕಾವ್ಯಗಳು
- ಕನ್ನಡ ರಂಗಭೂಮಿ ಮತ್ತು ಜಾನಪದ
- ಜಾನಪದ ಕಥನಗಳ ಇಂಗ್ಲೀಷ್ ಅನುವಾದ
- ಕನ್ನಡದ ಕಣ್ಣಲ್ಲಿ ವಿಶ್ವ ಜಾನಪದ
- ವಿಶ್ವದ ಕಣ್ಣಲ್ಲಿ ಕನ್ನಡ ಜಾನಪದ
- ಜಾನಪದ–ಶಿಷ್ಟ ಪರಂಪರೆಯಲ್ಲಿ ಮಹಿಳೆ
- ಕನ್ನಡ ಜಾನಪದ ಮತ್ತು ದೇಸಿ ವಿದ್ವಾಂಸರು
- ಜಾನಪದ–ಶಿಷ್ಟ ಸಾಹಿತ್ಯ: ತೌಲನಿಕ ನೋಟ



- ಕನ್ನಡ ಭಾಷಿಕ ವೈವಿಧ್ಯತೆ ಮತ್ತು ಜಾನಪದ ಲೋಕ
- ಕನ್ನಡದಲ್ಲಿ ಜಾನಪದ ಸಂಪಾದನೆ ಮತ್ತು ಸಂಶೋಧನೆಗಳು
- ಜಾನಪದ–ಶಿಷ್ಟ ಕಲೆಗಳು ಮತ್ತು ಕಲಾವಿದರು
- ಜಾನಪದ–ಶಿಷ್ಟ ಪರಂಪರೆಯಲ್ಲಿ ಶ್ರಮಿಕ ವರ್ಗ
- ಕನ್ನಡ ಸಾಹಿತ್ಯ: ಜಾನಪದ ಮತ್ತು ಶಾಸ್ತ್ರೀಯ ಮುಖಾಮುಖಿ
- ಶಿಷ್ಟ ಕಾವ್ಯಮೀಮಾಂಸೆ ಮತ್ತು ಜಾನಪದ ಕಾವ್ಯಮೀಮಾಂಸೆ
- ಕನ್ನಡ ಸಿನೆಮಾಗಳಲ್ಲಿ ಜಾನಪದ ಲೋಕ ದರ್ಶನ



ಮೇಲಿನ ವಿಷಯಗಳಷ್ಟೇ ಅಲ್ಲದೆ, ವಿಚಾರ ಸಂಕಿರಣದ ಆಶಯಕ್ಕೆ ಹೊಂದುವಂತೆ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿ ಕಳುಹಿಸಬಹುದು.


ಸಾರಲೇಖವನ್ನು 250 ಪದಗಳ ಮಿತಿಯಲ್ಲಿ ಕಳುಹಿಸುವುದು. ಸಾರಲೇಖ ಆಯ್ಕೆಯಾದ ನಂತರ ಪೂರ್ಣ ಪ್ರಬಂಧವನ್ನು 3000 ಪದಗಳ ಮಿತಿಯಲ್ಲಿ ನುಡಿ ತಂತ್ರಾಂಶದಲ್ಲಿ(ನುಡಿ 01ಇ, ಗಾತ್ರ 13, ಸಾಲಿನ ಅಂತರ 1.5) ತಪ್ಪಿಲ್ಲದೆ ಟೈಪಿಸಿ, ತಿದ್ದುಪಡಿ ಮಾಡಿ ವರ್ಡ್‌ಫೈಲ್‌ನಲ್ಲಿ ಕಳುಹಿಸುವುದು. ಸರಿಯಾಗಿ ತಿದ್ದುಪಡಿಯಾಗದ ಲೇಖನಗಳನ್ನು ಸ್ವೀಕರಿಸುವುದಿಲ್ಲ. ವಿಚಾರ ಸಂಕಿರಣದಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ISBN ನಮೂದಿತ ಪುಸ್ತಕದಲ್ಲಿ ಪ್ರಕಟಿಸಲಾಗುವುದು. ವಿಚಾರ ಸಂಕಿರಣದ ದಿನ ಪ್ರಮಾಣಪತ್ರದೊಂದಿಗೆ ಪುಸ್ತಕವನ್ನು ನೀಡಲಾಗುವುದು.

- ಸಾರಲೇಖವನ್ನು ಕಳುಹಿಸುವ ಕೊನೆಯ ದಿನಾಂಕ : 20 ಅಕ್ಟೋಬರ್ 2024
- ಪೂರ್ಣ ಪ್ರಬಂಧವನ್ನು ಸಲ್ಲಿಸುವ ಕೊನೆಯ ದಿನಾಂಕ : 10 ನವೆಂಬರ್ 2024
- ಪ್ರಬಂಧವನ್ನು ಕಳುಹಿಸಬೇಕಾದ ಇ–ಮೇಲ್ ವಿಳಾಸ : kjksp@kristujayanti.com

| ನೋಂದಣಿ ಶುಲ್ಕದ ವಿವರ | | | |
|---|---|---|---|
| ನೋಂದಣಿ | ಅಧ್ಯಾಪಕರು | ಸಂಶೋಧನಾರ್ಥಿಗಳು | ಸ್ನಾತಕೋತ್ತರ ಪದವಿ & ಪದವಿ ವಿದ್ಯಾರ್ಥಿಗಳು |
| ಪ್ರಬಂಧ ಮಂಡನೆ & ಭಾಗವಹಿಸುವಿಕೆ | ೧೦೦೦ | ೮೦೦ | ೬೦೦ |
| ಭಾಗವಹಿಸುವಿಕೆ ಮಾತ್ರ | ೭೦೦ | ೫೦೦ | ೩೦೦ |

ನೋಂದಣಿಗಾಗಿ ಈ ಕೆಳಕಂಡ ಕ್ಯೂಆರ್ ಕೋಡ್ ಅಥವಾ ಲಿಂಕ್‌ನ್ನು ಕ್ಲಿಕ್ ಮಾಡಿರಿ.

https://portal.kristujayanti.edu.in/event-international-seminar-on-classical-tradition-of-kannada-and-folk-world



## ಪ್ರಧಾನ ಪೋಷಕರು

**ಫಾ. ಡಾ. ಅಗಸ್ಟಿನ್ ಜಾರ್ಜ್**
ಪ್ರಾಂಶುಪಾಲರು, ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)

## ಪೋಷಕರು

ಫಾ. ಡಾ. ಲಿಜೋ ಪಿ ಥಾಮಸ್ CMI | ರೆ. ಫಾ. ಸೋಮ್ ಜ಼ಕಾರಿಯಾ CMI | ರೆ. ಫಾ. ಇಮ್ಯಾನುಯೆಲ್ ಪಿ.ಜೆ. CMI
ರೆ. ಫಾ. ಜೈಸ್ ವಿ ಥಾಮಸ್ CMI | ರೆ. ಫಾ. ಜೋಸಿ ಮ್ಯಾಥ್ಯೂ CMI | ರೆ. ಫಾ.ದೀಪು ಜಾಯ್ CMI

## ಸಲಹಾ ಸಮಿತಿ

**ಶ್ರೀ ಗೊಲ್ಲಹಳ್ಳಿ ಶಿವಪ್ರಸಾದ್**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ

**ಶ್ರೀಮತಿ ನಮ್ರತ ಎನ್.**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

**ಡಾ. ಮೈ.ಶ್ರೀ.ನಟರಾಜ್**
ಅಧ್ಯಕ್ಷರು
ಕನ್ನಡ ಸಾಹಿತ್ಯ ರಂಗ, ಅಮೆರಿಕ

## ಸಂಯೋಜಕರು

**ಕ್ಯಾಪ್ಟನ್ ಡಾ. ಸರ್ವೇಶ್ ಬಿ.ಎಸ್.**
ಪ್ರಧಾನ ಸಂಯೋಜಕರು
9738482935

**ಡಾ. ಬೈರಪ್ಪ ಎಂ.**
ಸಂಯೋಜಕರು
9741436723

## ಸಹ ಸಂಯೋಜಕರು

**ಶ್ರೀ ಚಂದ್ರಶೇಖರ್ ಎನ್.**
9916465100

**ಡಾ. ಸೈಯದ್ ಮುಯಿನ್**
9972925077

**ಡಾ. ರವಿಶಂಕರ್ ಎ.ಕೆ.**
9663433403

**ಡಾ. ಪ್ರೇಮ್‌ಕುಮಾರ ಕೆ.**
8310460022

**ಡಾ. ಕಿರಣಕುಮಾರ್ ಹೆಚ್.ಜಿ.**
6366595617



**ಜನವಾಣಿ ಬೇರು ಕವಿವಾಣಿ ಹೂವು – ಬಿ.ಎಂ.ಶ್ರೀ**